ಇ) ವಿಷಯ : ಬ್ಯಾಲಾಳು ಐ.ಡಿ.ಎಸ್.ಎನ್. ಬಳಿ ದಿನಾಂಕ: 16.03.2010ರ ಬೆಳಗಿನ ಜಾವ ನಡೆದ ಘಟನೆ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, 16ನೇ ತಾರೀಖಿನ ದಿವಸ ಇಸ್ರೋ ಕ್ಯಾಂಪಸಿನಲ್ಲಿ ಫೈರಿಂಗ್ ಆಗಿದೆ ಎಂದು ಪತ್ರಿಕೆಯಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಸುಮಾರು 3.30ರಲ್ಲಿ ಇಬ್ಬರು ವ್ಯಕ್ತಿಗಳು ಫೈರಿಂಗ್ ಮಾಡಿದರು, ಅದಕ್ಕೆ ಪ್ರತಿಯಾಗಿ ಸಿ.ಐ.ಎಸ್.ಎಫ್.ನ ಕಾನ್ಸ್‌ಟೇಬಲ್ ಆದ ಭಗವಾನ್ ಜಾಧವ್ ಎಂಬುವವರು ಸುಮಾರು 8 ಸುತ್ತು ಫೈರ್ ಮಾಡಿದ್ದಾರೆ. ಆನಂತರ ಅವರು ಎಸ್ಕೇಪ್ ಆಗಿದ್ದಾರೆ, ಯಾವುದೇ ಸಾವು-ನೋವು ಆಗಿಲ್ಲವೆಂದು ವರದಿ ಬಂದಿದೆ. ಇದು Security ಗೆ ಸಂಬಂಧ ಪಟ್ಟಂಥ ಪ್ರಶ್ನೆಯಾಗಿದೆ. ಆದ್ದರಿಂದ, ಅಲ್ಲಿಗೆ ಹೋದವರು ಯಾರು ಮತ್ತು ಅಲ್ಲಿಗೆ ಏಕೆ ಹೋಗಿದ್ದರೆಂದು ಹಾಗೂ ಅವರ ಉದ್ದೇಶ ಏನಾಗಿತ್ತು ಎಂಬುದರ ಬಗ್ಗೆ ಮತ್ತು ಅಲ್ಲಿ ಫೈರ್ ಮಾಡಿದ್ದು ಏಕೆ ಮತ್ತು ಅವರು ಯಾರ ಮೇಲೆ ಫೈರ್ ಮಾಡಿದ್ದಾರೆ ಎಬುದು ಅಂದರೆ, ಬಿಲ್ಡಿಂಗ್ ಅಥವಾ ವ್ಯಕ್ತಿಯ ಮೇಲೆ ಫೈರಿಂಗ್ ಮಾಡಿದ್ದಾರೆಯೇ? ಕಾನ್ಸ್‌ಟೇಬಲ್ 8 ಸುತ್ತು ಏತಕ್ಕೆ ಫೈರ್ ಮಾಡಿದ್ದಾನೆ ಎಂಬ ಬಗ್ಗೆ ಮಾಹಿತಿ ಬೇಕು. ಆದರೆ, ಇದರಲ್ಲಿ ಯಾರೂ ಸತ್ತಿಲ್ಲವೆಂದು ಹೇಳಿದ್ದಾರೆ. ಪೊಲೀಸ್‌ನವರು ಅಲ್ಲಿಗೆ ಹೋಗಿ ತನಿಖೆ ಮಾಡಿದ್ದಾರೆ. ಆದರೆ, ಆ ವ್ಯಕ್ತಿಗಳು ಯಾರೆಂಬುದು ಪತ್ತೆಹಚ್ಚತಕ್ಕಂಥದ್ದು ಮತ್ತು ಅವರನ್ನು ಅರೆಸ್ಟ್ ಮಾಡಿಸುವಂಥ ಕೆಲಸ ಇವತ್ತಿನವರೆಗೂ ಸಹ ಆಗಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರ ವರದಿ ಕೇಳಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. What is the actual position? ಎಂಬ ಬಗ್ಗೆ ಮಾಹಿತಿ ಬೇಕು. ಅಂದರೆ, ಅಲ್ಲಿಗೆ ಹೋದಂಥ ಇಬ್ಬರು ವ್ಯಕ್ತಿಗಳು ಯಾರು, ಈತ ಏಕೆ ಫೈರ್ ಮಾಡಿದ ಹಾಗೂ ಆತನ ಉದ್ದೇಶ ಏನೆಂಬುದರ ಬಗ್ಗೆ ಸರ್ಕಾರದ ಹತ್ತಿರ ಬೇರೆ ಏನಾದರೂ ಮಾಹಿತಿ ಇದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

- ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಪೊಲೀಸ್ ಠಾಣೆ ಸರಹದ್ದಿನ ಬ್ಯಾಲಾಳು ಗ್ರಾಮದ ಬಳಿ ಇರುವ ಭಾರತೀಯ ಅಂತರಿಕ್ಷ ಸಂಶೋಧನೆಗೆ ಸಂಬಂಧಿಸಿದ ಐ.ಡಿ.ಎಸ್.ಎನ್. ಸೌಲಭ್ಯದಡಿಯಲ್ಲಿ "ಚಂದ್ರಯಾನ" ಯೋಜನೆಯ ಉಪಗ್ರಹ ಕಳುಹಿಸುವ ಸೂಕ್ಷ್ಮ ತರಂಗಗಳನ್ನು ಸ್ವೀಕರಿಸಲು 2006ರಲ್ಲಿ ಎರಡು ಭೃಹತ್ ಆಂಟೆನಾಗಳನ್ನು ಸುಮಾರು 125 ಎಕರೆ ಜಮೀನಿನ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿದೆ. ಇದರ ಭದ್ರತೆಯ ಜವಾಬ್ದಾರಿಯನ್ನು ಸಿ.ಐ.ಎಸ್.ಎಫ್.ಗೆ ವಹಿಸಲಾಗಿದೆ. ದಿನದ 24 ಗಂಟೆಯ ಅವಧಿಯಲ್ಲಿ ಭದ್ರತೆ ಮೇಲ್ವಿಚಾರಣೆಗೆ ಒಬ್ಬ ಸಹಾಯಕ ಕಮಾಂಡೆಂಟ್ ಮತ್ತು ಒಬ್ಬ ಇನ್ಸ್‌ಪೆಕ್ಟರ್ ಹಾಗೂ ಇತರ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.
- ಐ.ಡಿ.ಎಸ್.ಎನ್. ಸೌಲಭ್ಯದ ಸುತ್ತ ಸುಮಾರು ಆರು ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಮುಖ್ಯದ್ವಾರವೂ ಸೇರಿದಂತೆ ಸುಮಾರು ಏಳು ಪ್ರಮುಖ ಸ್ಥಳಗಳಲ್ಲಿ ದಿನದ 24 ಗಂಟೆ ಅವಧಿಯಲ್ಲಿ ಮೂರು ಪಾಳಿಗಳಲ್ಲಿ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ಭದ್ರತೆ ಕಾರ್ಯಗಳಿಗೆ ನಿಯೋಜಿಸ ಲಾಗುತ್ತಿದೆ.
- ದಿನಾಂಕ: 16.03.2010ರ ಬೆಳಗಿನ ಜಾವ ಸುಮಾರು 4.30 ಗಂಟೆಯಲ್ಲಿ ಸಿ.ಐ.ಎಸ್.ಎಫ್.ನ ಇನ್ಸ್‌ಪೆಕ್ಟರ್ ಶಿವಪ್ರಸಾದ್ ಅವರು ತಾವರೆಕೆರೆ ಪೊಲೀಸ್ ಠಾಣೆಗೆ ದೂರವಾಣಿ ಕರೆ ಮಾಡಿ ಐ.ಡಿ.ಎಸ್.ಎನ್.ನ ಮುಖ್ಯದ್ವಾರದಲ್ಲಿ ಕರ್ತವ್ಯ ನಿರತರಾಗಿದ್ದ ಪಹರೆಯವರ ಕಡೆಗೆ ಯಾರೋ ದುಷ್ಕರ್ಮಿ ಗಳು ಗುಂಡನ್ನು ಹಾರಿಸಿದರೆಂದು ಮತ್ತು ಆ ಸಂದರ್ಭದಲ್ಲಿ ಮುಖ್ಯ ದ್ವಾರದ ಬಳಿ ಭದ್ರತಾ ಕಾರ್ಯದಲ್ಲಿ ನಿರತರಾಗಿದ್ದ ಶಸ್ತ್ರಸಜ್ಜಿತ ಪಹರೆ ಸಿಬ್ಬಂದಿ ಪ್ರತಿಯಾಗಿ ಗುಂಡು ಹಾರಿಸಿದಾಗ ದುಷ್ಕರ್ಮಿಗಳು ಪರಾರಿಯಾಗಿರುತ್ತಾರೆಂದು ತಿಳಿಸಿರುತ್ತಾರೆ.
- ಘಟನೆ ಬಗ್ಗೆ ತಿಳಿದ ಕೂಡಲೇ ಪೊಲೀಸ್ ಇನ್ಸ್‌ಪೆಕ್ಟರ್ ಅವರು ಅಪರಾಧ ಜರುಗಿದ ಸ್ಥಳವನ್ನು ಪರಿಶೀಲಿಸಿದ ನಂತರ ಶಿವಪ್ರಸಾದ್ ಮತ್ತು ಸಿ.ಐ.ಎಸ್.ಎಫ್.ನ ಇತರ

ಅಧಿಕಾರಿಗಳು ಘಟನೆ ಬಗ್ಗೆ ನೀಡಿದ ಮಾಹಿತಿಯಂತೆ ಬೆಳಗಿನ ಜಾವ ಸುಮಾರು 3.30ರ ಸುಮಾರಿಗೆ ಮುಖ್ಯದ್ವಾರದ ಆವರಣದಲ್ಲಿದ್ದ ನಾಯಿ ಶಬ್ದ ಮಾಡಿತ್ತು. ಆ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ಸಿ.ಐ.ಎಸ್.ಎಫ್.ನ ಕಾನ್ಸ್ ಟೇಬಲ್ ಜೆ.ವಿ. ಭಗವನ್(ಜಾಧವ್) ಮುಖ್ಯದ್ವಾರದ ಎಡಗಡೆ ನೋಡಿದಾಗ ಇಬ್ಬರು ದುಷ್ಕರ್ಮಿಗಳು ಕಂಡು ಬಂದರು. ಅವರು ಖಾಕಿ ಉಡುಪು ಧರಿಸಿದ್ದು ಒಬ್ಬಾತ ಕೈಯಲ್ಲಿ ಬೈನ್ಯಾಕುಲ್ರ್ ರೀತಿಯ ಉಪಕರಣ ಹಿಡಿದಿದ್ದ ಮತ್ತು ಇನ್ನೊಬ್ಬ ಚಿಕ್ಕ ಶಸ್ತ್ರಾಸ್ತ್ರ ಹೊಂದಿದ್ದನ್ನು. ಅದರಿಂದ ಪಹರೆ ಕರ್ತವ್ಯದಲ್ಲಿದ್ದ ಸಿಬ್ಬಂದಿ ಜೆ.ವಿ. ಭಗವಾನ್ ರತ್ತ ಗುರಿಮಾಡಿ ಸುಮಾರು 2 ಗುಂಡನ್ನು ಹಾರಿಸಿದಾಗ ಪ್ರತಿಯಾಗಿ ಕಾನ್ಸ್‌ಟೇಬಲ್ ಭಗವಾನ್ ತನ್ನ ಬಳಿಯಿದ್ದ ಇನ್‌ಸಾಸ್ ರೈಫಲ್‌ನಿಂದ ಸುಮಾರು 8 ಗುಂಡುಗಳನ್ನು ಹಾರಿಸಿದ. ಆಗ ದುಷ್ಕರ್ಮಿಗಳು ಕತ್ತಲಲ್ಲಿ ಪರಾರಿಯಾಗಿರುತ್ತಾರೆಂದು ಅವರು ತಿಳಿಸಿದ್ದಾರೆ.

❖ ತಕ್ಷಣವೇ ಬೆಂಗಳೂರು ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರಾದ ಡಾ. ರವೀಂದ್ರ ಅವರನ್ನು ಸ್ಥಳಕ್ಕೆ ಬರಮಾಡಿ ಕೊಂಡು ಅಪರಾಧ ಜರುಗಿದ ಸ್ಥಳವನ್ನು ಸಂಪೂರ್ಣವಾಗಿ ಪರಿಶೀಲಿಸಿ ವರದಿ ನೀಡುವಂತೆ ಕೋರಲಾಗಿತ್ತು. ಅದರಂತೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞ ಡಾ. ರವೀಂದ್ರ ಅವರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ಸ್ಥಳದಲ್ಲಿ 5 ಖಾಲಿ ಗುಂಡಿನ ನಳಿಕೆಗಳು ದೊರಕಿವೆ. ಅವುಗಳ ಮೇಲೆ ಓ.ಎಫ್.ವೈ. – **5.56*07** ಎಂದು ಮುದ್ರಿತವಾಗಿದ್ದು, ಇವುಗಳು ಸಿ.ಐ.ಎಸ್.ಎಫ್.ನ ಬಳಿಯಿದ್ದ ಇನ್‌ಸಾಸ್ ರೈಫಲ್ ನಿಂದ ಬಳಸಿರುವ ಗುಂಡುಗಳೆಂದು ತಿಳಿದು ಬಂದಿರುತ್ತದೆ. ಉಳಿದ 3 ಖಾಲಿ ಗುಂಡಿನ ನಳಿಕೆಗಳು ದೊರೆತಿರುವುದಿಲ್ಲ. ದುಷ್ಕರ್ಮಿಗಳು ಬಳಸಿದ ಶಸ್ತ್ರಾಸ್ತ್ರದ ಬಗ್ಗೆ ಅಥವಾ ಗುಂಡಿನ ಬಗ್ಗೆ ಯಾವುದೇ ಖಚಿತ ಮಾಹಿತಿ ಸ್ಥಳದಲ್ಲಿ ದೊರೆತಿರುವುದಿಲ್ಲ.

- ಸ್ಥಳದ ಸಂಪೂರ್ಣ ಪರಿಶೀಲನೆ ಮಾಡಿದಾಗ ದುಷ್ಕರ್ಮಿಗಳು ಕೃತ್ಯದಲ್ಲಿ ಬಳಸಿದ ಗುಂಡುಗಳ ಖಾಲಿ ನಳಿಕೆಗಳಾಗಲಿ, ಅಥವಾ ಸಂಬಂಧಿಸಿದ ಯಾವುದೇ ರಾಸಾಯನಿಕ ವಸ್ತು ಗಳಾಗಲಿ ದೊರೆತಿರುವುದಿಲ್ಲ. ಸ್ಥಳದಲ್ಲಿ ಮುಂಜಾಗ್ರತಾ ಕ್ರಮವಾಗಿ ಸಾಕಷ್ಟು ಬಂದೋಬಸ್ತ್ ವ್ಯವಸ್ಥೆ ಏರ್ಪಡಿಸಿ ಯಾವುದೇ ರೀತಿಯಲ್ಲಿ ದುಷ್ಕೃತ್ಯ ನಡೆಯದಂತೆ ನಿಗಾ ವಹಿಸಲಾಗಿದೆ.
- ಘಟನೆ ನಡೆದ ಸ್ಥಳಕ್ಕೆ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಕೇಂದ್ರ ವಲಯದ ಪೊಲೀಸ್ ಇನ್ಸ್ ಪೆಕ್ಟರ್ ಜನರಲ್ ಅವರು ಭೇಟಿ ನೀಡಿ ಪರಿಶೀಲಿಸಿರುತ್ತಾರೆ. ಗೋಡೆ ಮೇಲೆ ಯಾವುದೇ ಗುಂಡುತಾಗಿದ ಗುರುತು ಕೂಡ ಕಂಡು ಬಂದಿಲ್ಲ.
- ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಐ.ಎಸ್.ಎಫ್.ನ ಉಸ್ತುವಾರಿ ಅಧಿಕಾರಿ, ಸಹಾಯಕ ಕಮಾಂಡೆಂಟ್ ಪಿ.ಕೆ. ರಾಮಸ್ವಾಮಿ ಅವರು ನೀಡಿದ ದೂರನ್ನು ಅನುಸರಿಸಿ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಪ್ರಸ್ತುತ ತನಿಖೆ ಮುಂದುವರೆದಿದೆ.

ಮಾನ್ಯ ಅಧ್ಯಕ್ಷರೆ, ಇಷ್ಟನ್ನು ಪ್ರತಿಪಕ್ಷದ ನಾಯಕರಿಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆ ಬೆಳಗ್ಗೆ 7.00 ಗಂಟೆಗೆ ನಮಗೆ ಈ ಸುದ್ದಿ ಗೊತ್ತಾದ ತಕ್ಷಣ ನಮ್ಮ ಅಧಿಕಾರಿಗಳು ಅಲ್ಲಿಗೆ ಬೇಗ ಧಾವಿಸಿ ಹೋಗಿ ನೋಡಿದ್ದಾರೆ. ಅದು ಬಹಳ ಸೂಕ್ಷ್ಮವಾದ ಸ್ಥಳವಾಗಿರುವುದರಿಂದ ಎಚ್ಚರ ವಹಿಸಬೇಕಾಗುತ್ತದೆ. ಕೇಂದ್ರದ ಗೃಹ ಇಲಾಖೆ ಸಹ ಇದರ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಯಾವುದೇ ರೀತಿಯ ದುಷ್ಕೃತ್ಯಗಳು ಇದರ ಹಿಂದೆ ಇದೆ ಎಂದು ಮೇಲ್ನೋಟಕ್ಕೆ ಏನೂ ಕಾಣುತ್ತಿಲ್ಲ. ಆದರೂ ಸಹ ನಮ್ಮಿಂದ ಏನೇನು ತನಿಖೆಯಾಗಬೇಕು ಬಂದೋಬಸ್ತ್ ಮಾಡಬೇಕು ಮತ್ತು ಬಿಗಿಯಾದ ನಿಲುವನ್ನು ತೆಗೆದುಕೊಂಡು ತನಿಖೆ ಮುಂದುವರೆದಿದೆ.

ಹೆಚ್ಚಿನ ಮಾಹಿತಿ ಏನಾದರೂ ಸಿಕ್ಕರೆ ಖಂಡಿತವಾಗಿ ಈ ಮನೆಯಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ..

ಶ್ರೀ ಸಿದ್ದರಾಮಯ್ಯ : ಇವರ ಹೇಳಿಕೆಯಲ್ಲಿ ಯಾರೋ ಇಬ್ಬರು ಬಂದಿದ್ದರು ಅವರು ಫೈರ್ ಮಾಡಿದರು ಎಂದು ಹೇಳುತ್ತಾರೆ. ಅದಕ್ಕೇನೂ ಇದರಲ್ಲಿ ಮಾಹಿತಿ ಇಲ್ಲ. ಫೈರ್ ಮಾಡದೆ ಇವರ ಸಿ.ಐ.ಎಸ್.ಎಫ್.ನ ಭಗವಾನ್ ಎನ್ನುವವರು 8 ಬುಲೆಟ್‌ಗಳನ್ನು ಫೈರ್ ಮಾಡಿದ್ದಾನೆ. ಅಲ್ಲಿ ಒಬ್ಬರು ಸಬ್‌ಇನ್ಸ್‌ಪೆಕ್ಟರ್ ಲೆವಲ್ ಆಫೀಸರ್ ಇದ್ದಾರೆ. ಹೆಡ್‌ಕಾನ್ಸ್ ಟೇಬಲ್ ಇದ್ದಾರೆ. ಸುತ್ತ 6 ಅಡಿ ಎತ್ತರದ ಕಾಂಪೌಂಡ್ ಇದೆ. ಎಲ್ಲಾ ಇದ್ದರೂ ಕೂಡ ಇಬ್ಬರು ಎಲ್ಲಿಂದ ಒಳಗಡೆ ಬಂದರು? ಅವರು ಯಾರು ಎಂದು ಗೊತ್ತಿಲ್ಲ. ಅವರು ಅಪರಿಚಿತರು. ಅವರು ಗುಂಡು ಹಾರಿಸಿದ್ದಾರೆ. ಅವರು ಗುಂಡು ಹಾರಿಸಿದ್ದಕ್ಕೆ ಪ್ರತಿಯಾಗಿ ಇವನು ಗುಂಡು ಹಾರಿಸಿದ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಸಿ.ಐ.ಎಸ್. ಎಫ್.ನ ಭಗವಾನ್ ಹಾರಿಸಿದ ಗುಂಡುಗಳು ಬಿಟ್ಟರೆ, ಅವರು ಹಾರಿಸಿದ ಗುಂಡು ಏನೂ ಸಿಕ್ಕಿಲ್ಲ. ಈ ಭಗವಾನ್ ಏನಾದರೂ ಸುಳ್ಳು ಹೇಳುತ್ತಾನಾ ಅಥವಾ ಇನ್ನೇನಾದರೂ ಕಾರಣಗಳು ಇವೆಯೇ? ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡುವುದು ಒಳ್ಳೆಯದು. ಇದನ್ನು ತನಿಖೆ ಮಾಡಿ ವರದಿ ಮಾಡಬೇಕು. ಏಕೆಂದರೆ ಇದು ಬಹಳ ಸೂಕ್ಷ್ಮವಾದಂಥ ಪ್ರದೇಶ ಆಗಿರುವುದರಿಂದ ಅಲ್ಲಿ 24 ಗಂಟೆ ಭದ್ರತೆಯ ವ್ಯವಸ್ಥೆಯನ್ನು ಮಾಡಿರತಕ್ಕಂಥದ್ದು. Is there only failure on the part of security? ಅಥವಾ ಇವನೇನಾದರೂ ಸುಳ್ಳು ಹೇಳುತ್ತಾನೆಯೆ? ಇದನ್ನು ಕೂಲಂಕಷವಾಗಿ ತನಿಖೆ ಮಾಡಬೇಕು, ಇದನ್ನು ನೆಗ್ಲೆಕ್ಟ್ ಮಾಡಬಾರದೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಈ) ವಿಷಯ : ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ನನ್ನ ಕ್ಷೇತ್ರದ ಆಲೂರು ತಾಲ್ಲೂಕು ಕೇಂದ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಇದ್ದು ಅಲ್ಲಿ ಸುಮಾರು 310 ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರ್ಪಡೆಯಾಗಿದ್ದಾರೆ. ಆದರೆ ಕಾಲೇಜಿಗೆ ಸುಸಜ್ಜಿತವಾದ ಕಟ್ಟಡ ಇಲ್ಲದೆ ತರಗತಿ ನಡೆಯುವುದಕ್ಕೆ ತೊಂದರೆಯಾಗಿದೆ. ಪ್ರಯೋಗ ಶಾಲೆ ಆಗಿರಬಹುದು ಮತ್ತೊಂದು ಆಗಿರಬಹುದು ಅದಕ್ಕೆ ತೊಂದರೆಯಾಗಿದೆ. ಈಗ ನಡೆಯುತ್ತಿರತಕ್ಕಂಥ ಕಾಲೇಜು ನಮ್ಮ ಸರ್ಕಾರದ